**ದಿನಾಂಕ: 03.09.2022 ರಂದು ಬೆಳಿಗ್ಗೆ 11.30ಕ್ಕೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್–178 (ಸಾರಕ್ಕಿ) ನಡೆದ ಸಭೆಯ ನಡಾವಳಿಗಳು:**

## : ಚರ್ಚೆಯಾದ ವಿಷಯಗಳು :

1. ವಾಡ್–178ರಲ್ಲಿನ ಸಾರ್ವಜನಿಕರ ಎಲ್ಲಾ ರೀತಿಯ ಕುಂದುಕೊರತೆಗಳ ಬಗ್ಗೆ, ಅಭಿವೃದ್ಧಿ ಕಾಮಗಾರಿಗಳು ಹಾಗೂ ಘನತ್ಯಾಜ್ಯ ನಿರ್ವಹಣೆ ಮತ್ತು ಕೊವಿಡ್–19ರ ಬಗ್ಗೆ ಚರ್ಚಿಸುವ ಕುರಿತು.
2. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸುವಂತಹ ಇತರೆ ವಿಷಯಗಳು.

## : ಸಭೆಗೆ ಹಾಜರಾಗಿದ್ದವರ ವಿವರಗಳು :

| | |
|---|---|
| ಅಧ್ಯಕ್ಷರು | ನೋಡಲ್ ಅಧಿಕಾರಿ |
| ಸದಸ್ಯ ಕಾರ್ಯದರ್ಶಿ | ವಾರ್ಡ್ 178ರ ಸಹಾಯಕ ಅಭಿಯಂತರರು |
| ಸದಸ್ಯರುಗಳು | ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು |
| ಸದಸ್ಯರುಗಳು | ಬೆಸ್ಕಾಂ |
| ಸದಸ್ಯರುಗಳು | ತೋಟಗಾರಿಕಾ ಇಲಾಖೆಯ ಅಧಿಕಾರಿಗಳು |
| ಸದಸ್ಯರುಗಳು | ಅರಣ್ಯ ಇಲಾಖೆ ಅಧಿಕಾರಿಗಳು |
| ಸದಸ್ಯರುಗಳು | ಕಂದಾಯ ಪರಿವೀಕ್ಷಕರು |
| ಸದಸ್ಯರುಗಳು | ಬಿಡಬ್ಲ್ಯೂಎಸ್ಎಸ್‌ಬಿ ಅಧಿಕಾರಿಗಳು |
| ಸದಸ್ಯರುಗಳು | ಜೆ.ಪಿ.ನಗರ ಪೊಲೀಸ್ ಠಾಣಾ ಅಧಿಕಾರಿಗಳು |
| ಸದಸ್ಯರುಗಳು | ವಾರ್ಡ್ 178 ರ UPHC ನ ವಪ್ಯೆದ್ಯರು |
| ಸದಸ್ಯರುಗಳು | ಜೆ.ಪಿ.ನಗರ 2ನೇ ಹಂತ ನಾಗರೀಕ ಕಲ್ಯಾಣ ಸಂಘದ ಸದಸ್ಯರು ಹಾಗೂ ನಾಗರೀಕರು |
| ಸಾರ್ವಜನಿಕರು | ಮಾರ್ಷಲ್ |

## :ನಡಾವಳಿಯ ವರದಿ:

- ಅಧ್ಯಕ್ಷರು ಮಾತನಾಡುತ್ತಾ ಹಿಂದಿನ ಸಭೆಯಲ್ಲಿ ಚರ್ಚೆಯಾದ ವಿಷಯಗಳ ಬಗ್ಗೆ ಅಧಿಕಾರಿಗಳು ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

**ಸದರಿ ಸಭೆಯಲ್ಲಿ ಕಸ ವಿಲೇವಾರಿ ಸಮಸ್ಯೆ ಹಾಗೂ ಇತರೇ ದೂರುಗಳ ಬಗ್ಗೆ ಕುರಿತು ಈ ಕೆಳಕಂಡಂತೆ ಪ್ರಸ್ತಾಪಿಸಲಾಯಿತು.**

- ವಾರ್ಡ್ ವ್ಯಾಪ್ತಿಯ ಹಲವು ಕಡೆಗಳಲ್ಲಿ ಬೀದಿ ನಾಯಿಗಳ ಹಾವಳಿ ಜಾಸ್ತಿ ಆಗಿದ್ದು, ಇದನ್ನು ಕೂಡಲೇ ತಡೆಗಟ್ಟುವಂತೆ ಹಾಗೂ ಹಸುಗಳು ರಸ್ತೆಗಳಲ್ಲಿ ಓಡಾಡುತ್ತಿರುವುದರಿಂದ ವಾಹನ ಸಂಚಾರಕ್ಕೆ ಅಡಚಣೆಯುಂಟಾಗುತ್ತಿರುವುದಾಗಿ ಸಭೆಯಲ್ಲಿ ಚರ್ಚಿಸಲಾಯಿತು.

ಕ್ರಮ:–ಪಶುಸಂಗೋಪನೆ ಇಲಾಖೆ

- ವಾರ್ಡ್ ವ್ಯಾಪ್ತಿಯ 11ನೇ ಬಿ ಅಡ್ಡರಸ್ತೆಯಲ್ಲಿರುವ ಮರದ ಬಗ್ಗೆ ದೂರು ನೀಡಿದರೂ ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಹಾಗೂ ವಾರ್ಡ್ ವ್ಯಾಪ್ತಿಯ ಹಲವು ಕಡೆಗಳಲ್ಲಿ ಮರದ ರೆಂಬೆ–ಕೊಂಬೆಗಳು ನೇತಾಡುತ್ತಿದ್ದು, ಇದನ್ನು ಕೂಡಲೇ ತೆರವುಗೊಳಿಸುವಂತೆ ಸಭೆಯಲ್ಲಿ ಚರ್ಚಿಸಲಾಯಿತು.

ಕ್ರಮ : ಅರಣ್ಯ ಸಂರಕ್ಷಣಾಧಿಕಾರಿಗಳು, ದಕ್ಷಿಣ

- ವಾರ್ಡ್ 178 ವಾರ್ಡ್ ಕಛೇರಿಯ ಹಿಂಭಾಗದಲ್ಲಿರುವ ಖಾಲಿ ನಿವೇಶನದಲ್ಲಿ ಜಲ್ಲಿ, ಮರಳು ಹಾಕಿರುವುದರಿಂದ ಪಕ್ಕ ನಿವೇಶನದ ಕಟ್ಟಡಕ್ಕೆ ತೊಂದರೆಯಾಗುತ್ತಿರುವುದರಿಂದ ಇದನ್ನು ಕೂಡಲೇ ತೆರವುಗೊಳಿಸಲು ಹಾಗೂ 15ನೇ ಅಡ್ಡರಸ್ತೆ, 18ನೇ ಮುಖ್ಯರಸ್ತೆಯ ಜಂಕ್ಷನ್‌ನ ಮತ್ತು 21ನೇ ಮುಖ್ಯರಸ್ತೆ, 11ನೇ ಎ ಅಡ್ಡರಸ್ತೆ ಜಂಕ್ಷನ್‌ನ ಪಾದಚಾರಿ ಮಾರ್ಗದ ಮೇಲೆ ತಳ್ಳುವ ಗಾಡಿಗಳನ್ನು ಇಟ್ಟಿರುವುದರಿಂದ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಇದನ್ನು ಪೊಲೀಸ್ ರವರ ಸಹಾಯದೊಂದಿಗೆ ಕೂಡಲೇ ತೆರವುಗೊಳಿಸುವಂತೆ, ವಾರ್ಡ್ 178 ವಾರ್ಡ್ ಕಛೇರಿಯ ಹಿಂಭಾಗದಲ್ಲಿರುವ ಖಾಲಿ ನಿವೇಶನದಲ್ಲಿ ಪೌರಕಾರ್ಮಿಕರಿಗೆ ಶೆಲ್ಟರ್‌ಅನ್ನು ಅಳವಡಿಸುವಂತೆ, 5ನೇ ಹಂತ ಜೆ.ಪಿ.ನಗರದಲ್ಲಿರುವ ರಸ್ತೆಬದಿ ಚರಂಡಿಗಳಲ್ಲಿ ಹೂಳೆತ್ತುವ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ, ಜೆ.ಪಿ.ನಗರ 2ನೇ ಹಂತದ 22ನೇ ಮುಖ್ಯರಸ್ತೆ, 11ನೇ ಬಿ ಅಡ್ಡರಸ್ತೆ ಹಾಗೂ ಇನ್ನಿತರೆ ರಸ್ತೆಗಳಲ್ಲಿ ಗುಂಡಿ ಬಿದ್ದಿರುವುದರಿಂದ, ಇದನ್ನು ಕೂಡಲೇ ರಸ್ತೆಗುಂಡಿಗಳನ್ನು ಮುಚ್ಚುವಂತೆ ಹಾಗೂ ಧನ್ವಂತರಿ ಪಾರ್ಕಿನ ಸುತ್ತಮುತ್ತಲಿನ ರಸ್ತೆಗಳಲ್ಲಿರುವ ಮರಗಳಲ್ಲಿ ಕೇಬಲ್ ವೈರ್‌ಗಳು ನೇತಾಡುತ್ತಿದ್ದು, ಇದನ್ನು ಕೂಡಲೇ ತೆರವುಗೊಳಿಸುವಂತೆ, 9ನೇ ಅಡ್ಡರಸ್ತೆ, ಇನ್‌ಶ್ರೀ ಸ್ಕೂಲ್ ಎದುರು ಇರುವ ಪಾದಚಾರಿ ಮಾರ್ಗವನ್ನು ನರ್ಸರಿರವರು ಒತ್ತುವರಿ ಮಾಡಿಕೊಂಡಿದ್ದು, ಇದನ್ನು ಕೂಡಲೇ ತೆರವುಗೊಳಿಸುವಂತೆ ಸಭೆಯಲ್ಲಿ ಚರ್ಚಿಸಲಾಯಿತು.

**ಕ್ರಮ:-ಸ.ಕಾ.ನಿ.ಅ., ಜೆ.ಪಿ.ನಗರ ಉಪವಿಭಾಗ**

- ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಿಕೊಂಡಿರುವವರ ಮೇಲೆ ದಂಡವನ್ನು ವಿಧಿಸಬೇಕೆಂದು ಹಾಗೂ ವಾರ್ಡ್‌ನ ಹಲವು ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಸಮಸ್ಯೆ ಹೆಚ್ಚುತ್ತಿರುವುದರಿಂದ ಟ್ರಾಫಿಕ್ ವಾರ್ಡ್‌ಗಳನ್ನು ನಿಯೋಜಿಸಬೇಕೆಂದು, 9ನೇ ಅಡ್ಡರಸ್ತೆಯ ಹಲವು ಕಡೆಗಳಲ್ಲಿ ಅನಧಿಕೃತವಾಗಿ ಪಾರ್ಕಿಂಗ್ ಮಾಡುವುದರಿಂದ ಟ್ರಾಫಿಕ್ ದಟ್ಟಣೆ ಹೆಚ್ಚಾಗುತ್ತಿರುವುದರಿಂದ ಸಭೆಯಲ್ಲಿ ಚರ್ಚಿಸಲಾಯಿತು.

**ಕ್ರಮ : ಜಯನಗರ ಸಂಚಾರಿ ಪೊಲೀಸ್ ಠಾಣೆ**

- ವಾರ್ಡ್ ವ್ಯಾಪ್ತಿಯ ಹಲವು ಕಡೆಯ ರಸ್ತೆಬದಿಗಳಲ್ಲಿ ಬಿದ್ದಿರುವ ಮರದ ಎಲೆಗಳು, ಕೊಂಬೆಗಳನ್ನು ಕೂಡಲೇ ತೆರವುಗೊಳಿಸುವಂತೆ ಸಭೆಯಲ್ಲಿ ಚರ್ಚಿಸಲಾಯಿತು.

**ಕ್ರಮ : ಸ.ಕಾ.ನಿ.ಅ. ಎಸ್.ಡಬ್ಲ್ಯೂ.ಎಂ.**

- ವಾರ್ಡ್ ವ್ಯಾಪ್ತಿಯ ಹಲವು ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಂಪರ್ಕದ ಸಮಯವನ್ನು ಬದಲು ಮಾಡಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ಚರ್ಚಿಸಲಾಯಿತು.

**ಕ್ರಮ : ಸ.ಕಾ.ನಿ.ಅ., ಬಿಡಬ್ಲ್ಯೂಎಸ್‌ಎಸ್‌ಬಿ**

- ಕೊನೆಯದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಸಾರ್ವಜನಿಕರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆ ಪ್ರತಿ ತಿಂಗಳು ಮೊದಲ ಶನಿವಾರ ಹಾಗೂ ಮೂರನೇ ಶನಿವಾರ ಬೆಳಿಗ್ಗೆ 11.30 ಕ್ಕೆ ಇದೇ ರೀತಿಯಾಗಿ ಮಾಸಿಕ 2 ಬಾರಿ ವಾರ್ಡ್ ಸಮಿತಿ ಸಭೆ ನಡೆಯುವುದಾಗಿ ತಿಳಿಸಿ ಮುಂದಿನ ಸಭೆಗಳಿಗೆ ಈ ವಾರ್ಡಿನ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸದರಿ ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಕೋರಿ ಪತ್ರ ಬರೆಯಲು ಸದಸ್ಯ ಕಾರ್ಯದರ್ಶಿ ರವರಿಗೆ ಸೂಚಿಸಿದರು. ಹಾಗೂ ಗೈರು ಹಾಜರಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮಾನ್ಯ ಆಯುಕ್ತರವರಿಗೆ ಸೂಚಿಸಲಾಗುವುದೆಂದು ತಿಳಿಸಿದರು.

- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಇಂಜಿನಿಯರ್‌ರಾದ ಶ್ರೀ ಅಶ್ವತ್‌ರಾಮನ್ .ಆರ್, ವಾರ್ಡ್ 178 ಸಾರಕ್ಕಿ, ಸಭೆಗೆ ಹಾಜರಾದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳು/ನೌಕರರಿಗೂ ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ಹಾಗೂ ವಾರ್ಡ್178 ರ ಸಹಾಯಕ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ